MARCH 20, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಇಸ್ಲಾಮಿಕ್ ದಿನವಹಿಯ,** ರಂಜಾನ್ ಮಾಸದ, ಚಂದ್ರ ದರ್ಶನದೊಂದಿಗೆ ಆರಂಭವಾಗುವ, ಉಪವಾಸ ವ್ರತಾಚರಣೆ, 'ಶವ್ವಾಲ್' ತಿಂಗಳ ಚಂದ್ರ ದರ್ಶನದೊಂದಿಗೆ, ಕೊನೆಗೊಳ್ಳುತ್ತದೆ. 'ಶವ್ವಾಲ್' ತಿಂಗಳ, ಮೊದಲ ದಿನ, 'ಈದ್–ಉಲ್–ಫಿತ್ರ್' ಹಬ್ಬದ ಸಂಭ್ರಮ. 'ಈದ್ ನಮಾಜ್', ರಂಜಾನ್ ಹಬ್ಬದ ಪ್ರಮುಖ ಆಕರ್ಷಣೆ. 'ಈದ್ ನಮಾಜ್' ಬಳಿಕ, ವಿದ್ವಾಂಸರಿಂದ, 'ಖುತ್ಬಾ' ಪ್ರವಚನ ಜರುಗುತ್ತದೆ. 'ಫಿತ್ರ್ ಜಕಾತ್' ಕಡ್ಡಾಯವಾಗಿದ್ದು, ಸಹವರ್ತಿಗಳಿಗೆ, ಬಡವರಿಗೆ, ದಾನ ನೀಡುವ ಮೂಲಕ, ಬಡವ–ಬಲ್ಲಿದ ಎಂಬ ಭೇದವಿಲ್ಲದೇ, ಸಾಮೂಹಿಕ 'ನಮಾಜ್' ಮೂಲಕ, ಹಬ್ಬದಾಚರಣೆ ಮತ್ತು ಪ್ರಾರ್ಥನೆ ಸಲ್ಲಿಕೆ, ವಿಶೇಷ.

<><><>

**ಇಂದು, ರಾಜ್ಯದ ಕರಾವಳಿ ಭಾಗದ,** ದಕ್ಷಿಣಕನ್ನಡ, ಉಡುಪಿ, ಭಟ್ಕಳದಲ್ಲಿ, ಮುಸ್ಲಿಂ ಬಾಂಧವರು, 'ಈದ್ ಉಲ್ ಫಿತ್ರ್', ರಂಜಾನ್ ಹಬ್ಬವನ್ನು, ಸಾಮೂಹಿಕ ಪ್ರಾರ್ಥನೆ ಹಾಗೂ ಪರಸ್ಪರ ಶುಭಾಶಯ ಕೋರುವ ಮೂಲಕ, ಶ್ರದ್ಧಾಭಕ್ತಿಯಿಂದ ಆಚರಿಸಿದರು. ರಾಜ್ಯದ ಉಳಿದ ಭಾಗಗಳಲ್ಲಿ, ಚಂದ್ರ ದರ್ಶನದ ಬಳಿಕ, ನಾಳೆ ಹಬ್ಬವನ್ನು ಆಚರಿಸಲಾಗುವುದು ಎಂದು, ರಾಜ್ಯ ಚಂದ್ರ ದರ್ಶನ ಸಮಿತಿ, ಪ್ರಕಟಿಸಿದೆ.

<><><>

**ನಾಳೆ ಬೆಳಗ್ಗೆ 9.30ಕ್ಕೆ,** ಧಾರವಾಡ ಹಾಗೂ ಹುಬ್ಬಳ್ಳಿಯ ಈದ್ಗಾ ಮೈದಾನಗಳಲ್ಲಿ, ಸಾಮೂಹಿಕ ಪ್ರಾರ್ಥನೆ ಜರುಗಲಿದೆ ಎಂದು, ಅಂಜುಮನ್ ಎ ಇಸ್ಲಾಂ ಸಂಸ್ಥೆ ಪ್ರಕಟಣೆ ತಿಳಿಸಿದೆ.

<><><>

**ವಿಶ್ವ ಮನೆ ಅಂಗಳದ ಗುಬ್ಬಚ್ಚಿ** ದಿನವಿಂದು. ಕ್ಷೀಣಿಸುತ್ತಿರುವ, ಗುಬ್ಬಚ್ಚಿಗಳ ಸಂಕುಲದ ಉಳಿವಿನ ಬಗ್ಗೆ, ಜನ ಜಾಗೃತಿ ಮೂಡಿಸಲು, ಮತ್ತು ಅವುಗಳ ಸಂರಕ್ಷಣೆಯ ಮಹತ್ವವನ್ನು ಸಾರಲು, ಈ ದಿನ ಮೀಸಲಾಗಿದೆ. ಭಾರತದ, *ನೇಚರ್ ಫಾರ್ ಎವರ್ ಸೊಸಾಯಿಟಿ*ಯ, ನಾಸಿಕ್‌ನ ಮೊಹಮ್ಮದ್ ದಿಲಾವರ್, 2010ರಲ್ಲಿ ಮನೆ ಅಂಗಳದ ಗುಬ್ಬಚ್ಚಿಗಳ, ವಿಶ್ವ ದಿನಾಚರಣೆಗೆ, ಚಾಲನೆ ನೀಡಿದರು. ಗುಬ್ಬಚ್ಚಿಗಳು ನಮ್ಮ ಪರಿಸರ ವ್ಯವಸ್ಥೆಯ, ಆರೋಗ್ಯ ಸೂಚಕಗಳು ಎನ್ನುತ್ತಾರೆ, ಧಾರವಾಡದ ಪಕ್ಷಿಮಿತ್ರ ಆರ್.ಜಿ. ತಿಮ್ಮಾಪೂರ.

<><><>

**ಆರ್.ಜಿ. ತಿಮ್ಮಾಪೂರ ಧ್ವನಿ 40 ಸೆಕೆಂದುಗಳು**

<><><>

**ಜಿಲ್ಲಾ ಉತ್ಸವ ಸೇರಿದಂತೆ,** ಯಾವುದೇ ಸಮಾರಂಭಗಳಲ್ಲಿ, ಅಬ್ಬರದ ಡಿ.ಜೆ. ಸೌಂಡ್ ಸಿಸ್ಟಿಮ್ ಬಳಕೆ ನಿಷೇಧಿಸುವ ಕುರಿತು, ವಿಧಾನಸಭೆ ಕಲಾಪದಲ್ಲಿ, ಪಕ್ಷ ಭೇದ ಮರೆತು, ಎಲ್ಲ ಸದಸ್ಯರು ಬೆಂಬಲ ವ್ಯಕ್ತ ಪಡಿಸಿ, ಚರ್ಚಿಸಿದರು. ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಶಾಸಕ ಎಸ್.ಸುರೇಶಕುಮಾರ ಸೇರಿದಂತೆ, ಅನೇಕ ಶಾಸಕರು ಡಿ.ಜೆ. ನಿಷೇಧ ಪ್ರಸ್ತಾವಕ್ಕೆ, ಸಹಮತ ವ್ಯಕ್ತಪಡಿಸಿದರು.

<><><>

**ಉಭಯ ಸದನಗಳ ಶಾಸಕರು ಕೇಳಿರುವ ಪ್ರಶ್ನೆಗಳಿಗೆ,** ಪ್ರಸಕ್ತ ಅಧಿವೇಶನ, ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗುವ ಮುಂಚೆ, ಉತ್ತರಿಸಲಾಗುವುದು ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ, ವಿಧಾನ ಪರಿಷತ್ತಿಗೆ ಭರವಸೆ ನೀಡಿದ್ದಾರೆ.  ಸದನದಲ್ಲಿ ಸದಸ್ಯರು ಕೇಳಿದ, 688 ಪ್ರಶ್ನೆಗಳ ಪೈಕಿ, 400 ಪ್ರಶ್ನೆಗಳಿಗೆ ಉತ್ತರ ಬಾರದಿರುವ ಹಿನ್ನೆಲೆ, ಲೋಪ ಎಸಗಿದ ಇಲಾಖೆಗಳ ಕಾರ್ಯದರ್ಶಿಗಳನ್ನು, ಅಮಾನತು ಮಾಡುವಂತೆ, ಮುಖ್ಯಮಂತ್ರಿಯವರು ಸೂಚಿಸಿದ್ದಾಗಿ, ಸಚಿವ ಪರಮೇಶ್ವರ ಸ್ಪಷ್ಟ ಪಡಿಸಿದರು.

<><><>

**ನಂಜನಗೂಡು-ನಿಲಂಬೂರು ರೈಲು ಮಾರ್ಗ** ನಿರ್ಮಾಣಕ್ಕೆ, ಹೊಸದಾಗಿ, ಸ್ಥಳ ಸಮೀಕ್ಷೆ ಕೈಗೊಳ್ಳುವುದಾಗಿ, ರೇಲ್ವೆ ಖಾತೆ ಸಚಿವ, ಅಶ್ವಿನಿ ವೈಷ್ಣವ್, ಲೋಕಸಭೆ ಪ್ರಶ್ನೋತ್ತರ ವೇಳೆಯಲ್ಲಿ, ವಯನಾಡ್ ಸಂಸದೆ ಪ್ರಿಯಾಂಕಾ ವಾದ್ರಾ ಅವರ ಪ್ರಶ್ನೆಗೆ, ಉತ್ತರಿಸಿದ್ದಾರೆ. ರೇಲ್ವೆ ಯೋಜನೆಗೆ, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು, ಕ್ಷೇತ್ರ ಸಮೀಕ್ಷೆ ಪೂರ್ಣಗೊಂಡಿದೆ, ಎಂದರು.

<><><>

**ಬಳ್ಳಾರಿ ಸಂಸದ, ಈ ತುಕಾರಾಮ** ಅವರ ಪ್ರಶ್ನೆಗೆ, ಉತ್ತರಿಸಿರುವ, ರೇಲ್ವೆ ಖಾತೆ ಸಚಿವರು, ಬಳ್ಳಾರಿಯ ಸ್ವಾಮಿಹಳ್ಳಿ ಹಾಗೂ ಆಂಧ್ರ ಪ್ರದೇಶದ ರಾಯದುರ್ಗ ನಡುವೆ, ಬ್ರಾಡ್‌ಗೇಜ್ ರೈಲು ಮಾರ್ಗ ನಿರ್ಮಾಣಕ್ಕೆ, ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗಿದೆ. ವಿಸ್ತೃತ ಯೋಜನಾ ವರದಿ ಸಿದ್ಧ ಪಡಿಸಲಾಗುವುದು, ಎಂದಿದ್ದಾರೆ.

<><><>

**ಐವತ್ತು ವರ್ಷ ದಾಟಿದ ಶಾಲಾ ಶಿಕ್ಷಕಿಯರು ಹಾಗೂ** ವರ್ಗಾವಣೆಯಾಗಿರುವ ಶಿಕ್ಷಕರಿಗೆ, ಜನ ಗಣತಿ ಕಾರ್ಯದಿಂದ, ವಿನಾಯಿತಿ ನೀಡುವಂತೆ, ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ, ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ. ಸ್ಥಳೀಯವಾಗಿ ಲಭ್ಯವಿರುವ, ವಿವಿಧ ಇಲಾಖೆಗಳ ಸಿಬ್ಬಂದಿಯನ್ನು, ಬಳಸಿಕೊಂಡು, ಮತದಾರರ ಪಟ್ಟಿಯ, ವಿಶೇಷ ಸಮಗ್ರ ಪರಿಷ್ಕರಣೆ, ಹಾಗೂ ಜನ ಗಣತಿ ಪ್ರಕ್ರಿಯೆ ನಿಭಾಯಿಸುವಂತೆ, ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

<><><>

**ಧಾರವಾಡದ, ವಿದ್ಯಾಧರೆ ಶೈಕ್ಷಣಿಕ** ಮತ್ತು ಸಾಂಸ್ಕೃತಿಕ ಟ್ರಸ್ಟ್ ಕೊಡಮಾಡುವ, ಪಂಡಿತ ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪ್ರಶಸ್ತಿಗೆ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ, ಬೆಂಗಳೂರಿನ ಕೌಶಿಕ ಐತಾಳ ಆಯ್ಕೆಯಾಗಿದ್ದಾರೆ.  ಪ್ರಶಸ್ತಿ 25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ನಾಡಿದ್ದು, ಪೂಜ್ಯ ಪಂಚಾಕ್ಷರಿ ಗವಾಯಿಗಳ ಜಯಂತ್ಯುತ್ಸವದಂದು, ಆಲೂರು ವೆಂಕಟರಾವ ಭವನದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ

<><><>

**ಹಾವೇರಿ ಜಿಲ್ಲೆ, ಹಾನಗಲ್ಲ** ಶಾಸಕ, ಶ್ರೀನಿವಾಸ ಮಾನೆ, ತಮ್ಮ ಕಚೇರಿಯಲ್ಲಿ, ಇಂದು ಮಧ್ಯಾಹ್ನ 12 ಗಂಟೆಯಿಂದ, ಜನಸಂಪರ್ಕ ಸಭೆ ನಡೆಸಲಿದ್ದಾರೆ. ಸಾರ್ವಜನಿಕರು ಮಧ್ಯಾಹ್ನ 3 ಗಂಟೆಯ ವರೆಗೆ, ಭೇಟಿ ನೀಡಿ, ಅಹವಾಲು ಸಲ್ಲಿಸಬಹುದು.

<><><>

**ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲೂಕು,** ನಾಗನೂರಿನ ಶ್ರೀ ಗುರುಬಸವ ಮಠದಲ್ಲಿ, ಇಂದು ಸಂಜೆ 7 ಗಂಟೆಗೆ, ಬಸವಧರ್ಮ ಉತ್ಸವ ಹಾಗೂ ಅಲ್ಲಮಪ್ರಭುಗಳ ಜಯಂತ್ಯುತ್ಸವ ಆಯೋಜಿತವಾಗಿದೆ. ಇಲಕಲ್ಲಿನ, ಚಿತ್ತರಗಿ ಸಂಸ್ಥಾನ ಮಠದ, ಶ್ರೀ ಗುರುಮಹಾಂತ ಸ್ವಾಮೀಜಿ ಸಾನಿಧ್ಯವಹಿಸಲಿದ್ದು, ಶ್ರೀ ಬಸವಪ್ರಕಾಶ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**